# ವಿದ್ಯಾಕಾಶಿ ಕರಿಯರ್ ಅಕಾಡೆಮಿ

ಸಮಯ : 90 ನಿಮಿಷಗಳು

ನೊಂದಣಿ ಸಂಖ್ಯೆ :

## ಪಿಎಸ್ಐ ಪತ್ರಿಕೆ – 1

ಪ್ರಶ್ನೆಗಳು

ಅಂಕಗಳು : 100

ಪ್ರಬಂಧ, ಭಾಷಾಂತರ & ಸಾರಾಂಶ ಬರವಣಿಗೆ,

ಹೆಸರು :

ಮೊಬೈಲ್ ನಂ :

## ಭಾಗ – I

ಈ ಕೆಳಕಂಡ ಯಾವುದಾದರೂ ಒಂದು ವಿಷಯಕ್ಕೆ 600 ಪದಗಳು ಮೀರದಂತೆ ಪ್ರಬಂಧವನ್ನು ಬರೆಯಿರಿ.

1. ಕೃಷಿ ವಲಯ ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಅಗತ್ಯ ಸುಧಾರಣೆಗಳ ಬಗ್ಗೆ ವಿಮರ್ಶಾತ್ಮಕವಾಗಿ ಚರ್ಚಿಸಿರಿ.

ಅಥವಾ

2. ಕರೋನಾ ಸೃಷ್ಟಿಸಿದ ಆರ್ಥಿಕ ಬಿಕ್ಕಟ್ಟನ್ನು ಕುರಿತು ವಿಶ್ಲೇಷಿಸಿರಿ.

ಅಥವಾ

3. "ಮಹಿಳಾ ಸಬಲೀಕರಣ ಇಂದಿನ ಅಗತ್ಯ ಬೆಳವಣಿಗೆ" ಎಂಬುದನ್ನು ಸಮರ್ಥಿಸಿರಿ.

ಅಥವಾ

4. ಇಸ್ರೋ ಸಾಧನೆಗಳನ್ನು ವಿವರಿಸಿರಿ. .

ಅಥವಾ

5. ಅಂತರಾಷ್ಟೀಯ ಸಂಬಂಧಗಳು ಹಾಗೂ ಭಾರತದ ಪಾತ್ರ ಕುರಿತು ವಿಶ್ಲೇಷಿಸಿ.

# ಭಾಗ – II

**II.** **ಈ ಕೆಳಕಂಡ ಸಾರಾಂಶವನ್ನು ಕನ್ನಡದಿಂದ ಇಂಗ್ಲೀಷಗೆ ಭಾಷಾಂತರಿಸಿ.**

**Translate the following paragraph from Kannada to English.**

ಗಾಂಧೀಜಿ ನಮ್ಮ ದೇಶದ ಶ್ರೇಷ್ಟ ವ್ಯಕ್ತಿ. ಅವರು ಈ ನೆಲದಲ್ಲಿ ಹುಟ್ಟಿದರು. ಬೆಳೆಯಲು ಪ್ರಾರಂಭಿಸಿದರು. ಜಗತ್ತಿನ ಸತ್ಯವನ್ನು ಹೀರಿಕೊಂಡು ಹೆಚ್ಚು ಬೆಳೆದರು. ಇಡೀ ಜಗತ್ತೀನ ಜನತೆ ನಿಂತು ನೋಡುವಂತೆ ಬೆಳೆದರು. ದೇಶವಿದೇಶಗಳ ಮಹಾಜನರು ಇವರ ಅಭಿಮಾನಿಗಳಾದರು. ಕೆಲವರಂತೂ ಇವರೊಡನೆ ಬದುಕುವುದೇ ಒಂದು ಹಿರಿಮೆ ಒಂದು ತಮ್ಮ ಊರು ದೇಶಗಳನ್ನು ಮರೆತು ಅನುಯಾಯಿಗಳಾದರು.

ಗಾಂಧೀಜಿ ತಮ್ಮ ಜೀವನದಲ್ಲಿ ಸತ್ಯ–ಧರ್ಮ–ಅಹಿಂಸೆಗಳೆಂಬ ಕುದುರೆಗಳನ್ನು ಸವಾರಿ ಮಾಡಿದರು. ಎದುರಾದ ಸಂಕಷ್ಟಗಳನ್ನು ನೇರವಾಗಿ ಎದುರಿಸಿದರು. ಎಲ್ಲವನ್ನೂ ಗೆದ್ದರು. ಅತಿ ಬಲಿಷ್ಠರಾದ ಬ್ರೀಟಿಷರನ್ನು ದಕ್ಷಿಣ ಆಫ್ರಿಕಾದಲ್ಲಿ ಹಾಗೂ ಭಾರತದಲ್ಲಿ ಎದುರಿಸಿದರು, ಮಣಿಸಿದರು. ಗಾಂಧಿಯವರು ಅಹಿಂಸೆಯನ್ನು ಪ್ರತಿಪಾದಿಸಿದಂತೆ ಉಳಿದವರು ಅಹಿಂಸೆಯನ್ನು ಪ್ರತಿಪಾದಿಸಲಾಗಲಿಲ್ಲ. ಆದ್ದರಿಂದಲೇ ಗಾಂಧೀಜಿ ಬೃಹತ್ ಗಾತ್ರಕ್ಕೆ ಬೆಳೆದರು. ಇದೆಲ್ಲವನ್ನೂ ಪರಿಶೀಲಿಸುವಾಗ ಒಂದು ಪ್ರಶ್ನೆ ಎದ್ದು ಬರುತ್ತದೆ. ಗಾಂಧೀಜಿಯವರ ಬಾಲ್ಯದಲ್ಲಿ ಏನಾದರೂ ವಿಶೇಷ ಕಂಡಿತ್ತೇ ಎಂಬುದು.

ಬಾಪುವು ಹುಟ್ಟಿದ್ದು 1869ರ ಅಕ್ಟೋಬರ್ ಎರಡನೇ ತಾರೀಖು. ಸೌರಾಷ್ಟ್ರದಲ್ಲಿ, ಹೆಸರೇ ಹೇಳುವಂತೆ ಆ ಭಾಗದಲ್ಲಿ ನೂರಾರು ರಾಜರುಗಳಿದ್ದರು. ತಮ್ಮ ತಮ್ಮ ರಾಜ್ಯಕ್ಕೆ ಅವರು ರಾಷ್ಟ್ರವೆಂದು ಕರೆಯುತ್ತಿದ್ದರು. ಅಂತಹ ಒಂದು ರಾಜ್ಯದಲ್ಲಿ ಬಾಪುವಿನ ಜನನ. ಬಾಪುಜಿ ಹುಟ್ಟಿದ ಮನೆತನವೂ ಪ್ರಸಿದ್ಧ ಮನೆತನ. ವ್ಯಾಪಾರ ಇವರ ಮನೆತನದ ಕಸಬು. ಬಾಪುವಿನ ಅಜ್ಜ ಹಾಗೂ ತಂದೆ ಪ್ರತಿಷ್ಠೆಯ ವ್ಯಕ್ತಿಗಳು, ಇಬ್ಬರು ಅವರ ರಾಜ್ಯದ ಮುಖ್ಯಮಂತ್ರಿಗಳೆಂದು ಸೇವೆ ಸಲ್ಲಿಸಿದರು. ಬಾಪುವಿನ ತಾಯಿ ಅತ್ಯಂತ ಸಾತ್ವಿಕ ಮಹಿಳೆ. ಅವರ ಮನೆಯಲ್ಲಿ ಸಾತ್ವಿಕತೆ ಹಾಗೂ ಧಾರ್ಮಿಕ ತುಂಬಿ ತುಳುಕುತ್ತಿದ್ದವು. ಬಾಪುವಿನ ತಾಯಿ ಜಪ, ಪ, ಉಪವಾಸಗಳನ್ನು ನಿಯಮಬದ್ದವಾಗಿ ನಡೆಸಿಕೊಂಡು ಹೋಗುತ್ತಿದ್ದರು.

# ಭಾಗ – III

III. ಈ ಕೆಳಕಂಡ ಸಾರಾಂಶವನ್ನು ಇಂಗ್ಲೀಷಿನಿಂದ ಕನ್ನಡಕ್ಕೆ ಭಾಷಾಂತರಿಸಿ.

**Translate the following paragraph from English to Kannada.**

**Child labour is an illegal act performed by the children in their little age by the involvement of some industrialists and businessman all over India. industrialists and businessmen generally chose child labour because of the effect work in minimum time at low cost, and children generally get involved in child labour because of their poverty and lack of education. people, who are very poor and cannot manage their two times food and clothes, become forced to send their kids and children to do some job at lowest payment instead of sending them to the school for education.**

# ಭಾಗ – IV

**II. ಈ ಕೆಳಕಂಡ ವಿಷಯವನ್ನು ಸಂಕ್ಷೇಪಿಸಿ. 1/3 ಕ್ಕಿಂತ ಮೀರದಂತೆ ಬರೆಯಿರಿ.**

ಒಂದು ಊರಿನಲ್ಲಿ ಒಬ್ಬ ಶ್ರೀಮಂತನಿದ್ದ. ಆತ ಮಹಾ ಜಿಪುಣ. ತಾನು ಗಳಿಸಿಟ್ಟ ಹಣವನ್ನು ಯಾರಾದರೂ ತೆಗೆದುಕೊಂಡು ಹೋದಾರು ಎನ್ನುವ ಭಯದಿಂದ ತನ್ನೆಲ್ಲಾ ಸಂಪತ್ತನ್ನು ಊರಾಚೆ ಇರುವ ಬನ್ನಿ ಗಿಡದ ಕೆಳಗೆ ಹುದುಗಿಸಿಡುತ್ತಾನೆ. ಪ್ರತಿ ನಿತ್ಯ ರಾತ್ರಿ ಕಂದೀಲು ಹಿಡಿದು ಆ ಸ್ಥಳಕ್ಕೆ ಬಂದು ಎಲ್ಲವೂ ಸರಿಯಾಗಿದೆಯೇ ಅಥವಾ ಇಲ್ಲವೇ ಎಂಬುವುದನ್ನು ಪರಿಶೀಲಿಸಿ ಹೋಗುತಿರುತ್ತಾನೆ.

ಇದೇ ಸಂದರ್ಭದಲ್ಲಿ ತನ್ನ ಬಳಿ ಸಾಲ ತೆಗೆದುಕೊಂಡಿದ್ದ ಬಡವನಿಗೆ ಹಣ ಹಿಂದಿರುಗಿಸುವಂತೆ ಶ್ರೀಮಂತ ದುಂಬಾಲು ಬಿಳುತ್ತಾನೆ. ಕೊಟ್ಟ ಹಣವನ್ನೇದಾದರೂ ಹಿಂದಿರುಗಿಸದಿದ್ದರೆ ಮನೆಯನ್ನು ಹರಾಜು ಹಾಕುವೆ ಎಂದು ಬೆದರಿಸುತ್ತಾರೆ. ಶ್ರೀಮಂತನ ಮಾತಿಗೆ ಬಡವ ತೀರಾ ನೋಯುತ್ತಾನೆ. ತನ್ನ ಸ್ಥಿತಿಗೆ ಬೇಸತ್ತು ನಡು ಕತ್ತಲಲ್ಲಿ ಊರಾಚೆ ಇರುವ ಬನ್ನಿ ಮರದ ಬಳಿ ಬರುತ್ತಾನೆ. ಸಾಯಲು ನಿರ್ಧರಿಸುತ್ತಾನೆ. ಅಷ್ಟು ಹೊತ್ತಿಗೆ ಕಂದಿಲು ಹಿಡಿದುಕೊಂಡು ವ್ಯಕ್ತಿಯೊರ್ವ ಅಲ್ಲಿಗೆ ಬರುತ್ತಿರುವುದನ್ನು ನೋಡುತ್ತಾನೆ. ಬಡವ ಮರದ ಹಿಂದಿರುವ ಪೊಟರೆಯಲ್ಲಿ ಅಡಗಿ ಕುಳಿತುಕೊಳ್ಳುತ್ತಾನೆ. ಮುಂದೆ ಏನಾಗುತ್ತದೆ ಎಂದು ಕುತೂಹಲದಿಂದ ನೋಡುತ್ತಾನೆ.

ಎಂದಿನಂತೆ ಶ್ರೀಮಂತ ಮರದ ಕೆಳಗೆ ಮಣ್ಣು ಅಗೆದು ಬಚ್ಚಿಟ್ಟಿದ್ದ ದುಡ್ಡು, ಒಡವೆಗಳೆನ್ನೆಲ್ಲಾ ಕಣ್ಣಿಗೊತ್ತಿಕೊಂಡು ಮತ್ತೆ ಮರಳಿ ಅಲ್ಲೇ ಇರಿಸಿ ಮನೆಗೆ ಹೋಗುತ್ತಾನೆ. ಶ್ರೀಮಂತ ಹೋದ ನಂತರ ಬಡವ ನಿಧಾನವಾಗಿ ಹಣವನ್ನು ಬಚ್ಚಿಟ್ಟಿರುವ ಜಾಗದತ್ತ ಬರತ್ತಾನೆ. ಅಲ್ಲಿ ಅವಿತಿಟ್ಟಿದ್ದ ಅಪಾರ ಸಂಪತ್ತನ್ನು ತೆಗೆದುಕೊಂಡು ಮನೆಗೆ ತೆರೆಳುತ್ತಾನೆ. ಮಾರನೇ ದಿನ ಶ್ರೀಮಂತನ ಮನೆಗೆ ಬಂದು ಅವನು ಕೊಟ್ಟ ಸಾಲಕ್ಕಿಂತ ದುಪ್ಪಟ್ಟು ಹಣವನ್ನು ನೀಡುತ್ತಾನೆ. ಉಳಿದ ಹಣದಲ್ಲಿ ತನಗೆ ಬೇಕಾದಷ್ಟನ್ನು ಇಟ್ಟುಕೊಂಡು ಇನ್ನುಳಿದುದನ್ನು ಬಡವರಿಗೆ ಹಂಚಿಬಿಡುತ್ತಾನೆ. ಆ ರಾತ್ರಿಯೇ ಹಳ್ಳಿಯನ್ನು ಬಿಟ್ಟು ಮತ್ತೊಂದು ಊರಿಗೆ ತೆರಳುತ್ತಾನೆ.

ಅದೇ ರಾತ್ರಿ ಶ್ರೀಮಂತ ಎಂದಿನಂತೆ ಬನ್ನಿಗಿಡದ ಕೆಳಗೆ ಅಗೆದು ನೋಡಿದರೆ ಅಲ್ಲೇನು ಇರುವುದಿಲ್ಲ. ಯಾರೊಂದಿಗೂ ಹೇಳಿಕೊಳ್ಳಲಾಗದೇ ಗೋಳಾಡುತ್ತಾನೆ. ಅದಕ್ಕೆ ಹಿರಿಯರು ಹೇಳೋದು 'ಕೊಟ್ಟಿದ್ದು ತನಗೆ ಬಚ್ಚಿಟ್ಟಿದ್ದು ಪರರಿಗೆ'.